**(ಇಂದು ದಿಃ 20.02.2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)**

ಪಾಟೀ ಸವಾಲು ಃ- ಶ್ರೀ ಡಿ.ಹೆಚ್.ಹೆಚ್. ವಕೀಲರಿಂದ ಪ್ರತಿವಾದಿ ಪರ ಃ-

ನಾನು ಫೋಟೋ ಸ್ಟುಡಿಯೋ ಹೊಂದಿರುತ್ತೇನೆ. ವಾದಿ ಮತ್ತು ಪ್ರತಿವಾದಿಯರು ನನಗೆ 2021 ನೇ ಸಾಲಿನಿಂದ ಗೊತ್ತು. ವಾದಿ ಮತ್ತು ಪ್ರತಿವಾದಿ ಸಂಬಂಧಿಕರು ಆಗಿರುತ್ತಾರೆ, ಆದರೆ ಏನು ಸಂಬಂಧ ನನಗೆ ಗೊತ್ತಿಲ್ಲ. ನನ್ನ ಸಾಕ್ಷ್ಯದ ಪ್ರಮಾಣ ಪತ್ರದ ಸಂಗತಿಗಳು ನನಗೆ ಗೊತ್ತು. ವಾದಿ ಮತ್ತು ಪ್ರತಿವಾದಿಯರು ಸಂಬಂಧಿಕರು ಆಗಬೇಕು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಎಷ್ಟು ವರ್ಷದಿಂದ ಕಲಬುರಗಿಯಲ್ಲಿ ವಾಸವಿದ್ದಾರೆ ನನಗೆ ಗೊತ್ತಿಲ್ಲ. ನಾನು ಪ್ರತಿವಾದಿಯ ಮನೆಗೆ ಹೋಗಿರುತ್ತೇನೆ. ಪ್ರತಿವಾದಿಯ ಮನೆ ಕಲಬುರಗಿಯ ವೈಷ್ಣವಿ ದೇವಿ ಮಂದಿರ ಬಳಿ ಇರುತ್ತದೆ. ದಾವಾ ಆಸ್ತಿಯನ್ನು ನಾನು ನೋಡಿರುವುದಿಲ್ಲ. ದಾವಾ ಸ್ವತ್ತಿನ ಸ್ವಾಧಿನ ಯಾರ ಬಳಿ ಇದೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಪ್ರತಿವಾದಿಗೆ ಯಾವ ರೀತಿ ಬಂತು ನನಗೆ ಗೊತ್ತಿಲ್ಲ. ನನ್ನ ಸಾಕ್ಷ್ಯದ ಪ್ರಮಾಣ ಪತ್ರದ ಸಂಗತಿಗಳು ನನಗೆ ತಿಳಿದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಸಮಕ್ಷಮ ದಾವಾ ಸ್ವತ್ತಿನ ಮಾರಾಟದ ಮಾತುಕತೆಯಾಗಿದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಪ್ರತಿವಾದಿಯ ಹಿರಿಯರಿಂದ ಬಂದ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ತಂದೆಗೆ ಎಷ್ಟು ಜನ ಸಹೋದರ, ಸಹೋದರಿಯರು ಇದ್ದಾರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ತಂದೆಯ ಸಹೋದರ, ಸಹೋದರಿಯರಿಗೆ ದಾವಾ ಸ್ವತ್ತಿನಲ್ಲಿ ಹಿಸ್ಸೆ ಇದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯು ಪ್ರತಿವಾದಿಗೆ ಮೂರು ಕಂತಿನಲ್ಲಿ ಹಣವನ್ನು ನೀಡಿರುತ್ತಾರೆ. ವಾದಿಯು 2ನೇ ಕಂತಿನ ಹಣವನ್ನು ಅವರ ಮನೆಯಲ್ಲಿ ನೀಡಿರುತ್ತಾರೆ. ಹಣವನ್ನು ನೀಡುವಾಗ ನಾನು ಇದ್ದೇನು. ಸದರಿ ಹಣವನ್ನು ಪ್ರತಿವಾದಿಯ ತಂದೆಗೆ ನೀಡಿದ್ದು ಅವರು ಅದನ್ನು ಎಣಿಕೆ ಮಾಡಿರುತ್ತಾರೆ. ಸದರಿ ಹಣವನ್ನು ನಾನು ಎಣಿಸಿರುವುದಿಲ್ಲ. ಸದರಿ ಹಣವನ್ನು ನನ್ನ ಸಮಕ್ಷಮ ನೀಡಲಾಗಿರುತ್ತದೆ. ಸದರಿ ಹಣ ರೂ.500/- ಮುಖ ಬೆಲೆಯ ನೋಟುಗಳಲ್ಲಿ ನೀಡಲಾಗಿದೆ. ಎಷ್ಟು ನೋಟುಗಳು ಇದ್ದವು ನನಗೆ ಗೊತ್ತಿಲ್ಲ. ಸದರಿ ಹಣವನ್ನು ವಾದಿ ಎಲ್ಲಿಂದ ತಂದರು ನನಗೆ ಗೊತ್ತಿಲ್ಲ. ವಾದಿಯು ತಮ್ಮ ಜಮೀನು ಮಾರಿದ ಹಣ ತಮ್ಮ ಬಳಿ ಇದ್ದು, ಅದನ್ನೇ ನೀಡಿದ್ದೇನೆ ಎಂದು ನುಡಿದಿರುತ್ತಾರೆ. ವಾದಿಯ ಗಂಡ ತನ್ನ ಜಮೀನನ್ನು ಮಾರಾಟ ಮಾಡಿರುತ್ತಾರೆ. ವಾದಿಯ ಗಂಡ ತನ್ನ ಜಮೀನನ್ನು ಯಾವಾಗ, ಯಾರಿಗೆ ಮತ್ತು ಎಷ್ಟು ಹಣಕ್ಕೆ ಮಾರಾಟ ಮಾಡಿದ್ದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಮಾರಾಟ ಮಾತುಕತೆ ಪ್ರತಿವಾದಿಯ ಮನೆಯಲ್ಲಿ ಆಗಿರುತ್ತದೆ. ದಿನಾಂಕ ನನಗೆ ನೆನಪು ಇಲ್ಲ, ಆದರೆ ಸಮಯ ಬೆಳಿಗ್ಗೆ 10.00 ಗಂಟೆಯಾಗಿತ್ತು. ಸದರಿ ಮಾತುಕತೆಗೆ ನನಗೆ ವಾದಿಯ ಗಂಡ ಕರೆಯಿಸಿದ್ದನು. ಮಾತುಕತೆಯ ದಿನದಂದೆ ರೂ.4,00,000/-ಹಣವನ್ನು ನೀಡಲಾಗಿದೆ. ಮಾತುಕತೆಗೆ ಹಣವನ್ನು ತೆಗೆದುಕೊಂಡು ಹೋಗಲಾಗಿತ್ತು. ಸದರಿ ದಿನಕ್ಕೆ

ಮುಂಚೆಯೇ ಮಾರಾಟದ ಬಗ್ಗೆ ಮಾತುಕತೆಯಾಗಿತ್ತು ಅದರೆ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಯರ ಮದ್ಯ ಈ ಮೊದಲು ಹಣಕಾಸಿನ ವ್ಯವಹಾರ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ವಾದಿಯ ಪ್ರತಿವಾನಿಗೆ ರೂ.5,00,000/-ಗಳನ್ನು ಕಂತಿನಲ್ಲಿ ಸಾಲವಾಗಿ ನೀಡಿದ್ದ, ಸದರಿ ಸಾಲಕ್ಕೆ ಪ್ರತಿವಾದಿಯು ಬಡ್ಡಿ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ಅಣ್ಣ ಬಡ್ಡಿ ಹಣವನ್ನು ವಾದಿಯ ಖಾತೆಗೆ ಫೋನ್ ಪೇ ಮೂಲಕ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ವಾದಿ ಸೇರಿ ಬಡ್ಡಿ ವ್ಯವಹಾರ ಮಾಡುತ್ತೇವೆ ಎಂದರೆ ಸರಿಯಲ್ಲ. ಮಾತುಕತೆಯ ಸಮಯದಲ್ಲಿ ಪ್ರತಿವಾದಿಯ ಸಹೋದರ, ತಂದೆ-ತಾಯಿ ಇದ್ದರು. ನಾನು ಮತ್ತು ಬಸವರಾಜ ಎಂಬುವವರು ಇದ್ದರು. ಪ್ರತಿವಾದಿಯು ದಾವಾ ಸ್ವತ್ತುನ್ನು ಬೇರೆಯವರಿಗೆ ಮಾರಾಟ ಮಾಡುತ್ತಿದ್ದಾನೆ ಎಂದು ನನಗೆ ಗೊತ್ತಿಲ್ಲ. ವಾದಿಯು ಪ್ರತಿವಾದಿಗೆ 3ನೇ ಕಂತಿನ ಹಣ ಆಳಂದ ನಗರದ ತಹಶ್ದಿಲಾರ ಕಛೇರಿಯಲ್ಲಿ ನೀಡಿರುತ್ತಾರೆ. ನಿಪಿ-1ನ್ನು ಆಳಂದ ನಗರದ ತಹಶ್ದಿಲಾರ ಕಛೇರಿಯಲ್ಲಿರುವ ಒಂದು ಅಂಗಡಿಯಲ್ಲಿ ತಯಾರಿಸಲಾಗಿದೆ, ಅವರ ಹೆಸರು ನನಗೆ ಗೊತ್ತಿಲ್ಲ. ನಿಪಿ-1ರ ಸಂಗತಿಗಳು ನನಗೆ ಗೊತ್ತು. ಖಾತೆ ನೀಡಿದ ನಂತರ ಕ್ರಯ ಪತ್ರ ಮಾಡಿಕೊಡಲು ನಿರ್ಧರಿಸಲಾಗಿತ್ತು. ಎಷ್ಟು ಸಮಯ ನಿಗಧಿ ಮಾಡಲಾಗಿತ್ತು ನನಗೆ ಗೊತ್ತಿಲ್ಲ. ಆದರೆ ಖಾತೆ ನೀಡಿದ ನಂತರ ಕ್ರಯ ಪತ್ರ ಮಾಡಲು ನಿಗಧಿ ಮಾಡಲಾಗಿತ್ತು. ನಿಪಿ-1ನ್ನು ತಯಾರಿಸಲು ಸಲುವಾಗಿ ನಾನು 2 ಬಾರಿ ಕಲಬುರಗಿ ಮತ್ತು ಆಳಂದ ನಗರಕ್ಕೆ ಬಂದು ಹೋಗಿರುತ್ತೇನೆ ದಿನಾಂಕ ನೆನಪು ಇಲ್ಲ. ವಾದಿಯ ಕಾಂಗ್ರೇಸ್ ಪಕ್ಷದ ಧುರಣಿರು ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು ನಾವು ಗುಂಡಾಗಳ ಸಹಾಯದಿಂದ ಪ್ರತಿವಾಯಿಂದ ಬಲವಂತವಾಗಿ ಕ್ರಯದ ಕರಾರನ್ನು ಬರೆಯಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ದಾವಾ ಸ್ವತ್ತು ಹೊರತುಪಡಿಸಿ ಬೇರೆ ಆಸ್ತಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿಯ ನಮ್ಮ ಗ್ರಾಮದ ವಾಸಿಯಾಗಿರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯದ ಪ್ರಮಾಣ ಪತ್ರದ ಸಂಗತಿಗಳು ತಿಳಿಯದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಆಳಂದ.